# ಯಶಸ್ಸಿನ ದುಂದುಭಿ–'ಫ್ರೀಡಮ್' ಕಾದಂಬರಿ

ವೀರಪ್ಪ ಪೂಜಾರ*

DOI: https://doi.org/10.5281/zenodo.21438709

**ABSTRACT**

ಡಾ. ಈರಣ್ಣ ಇಂಜಗನೇರಿ ಅವರ 'ಫ್ರೀಡಮ್' ಕಾದಂಬರಿಯು ಸ್ತ್ರೀ ಸಂವೇದನೆ ಹಾಗೂ ಮಹಿಳಾ ಸಬಲೀಕರಣದ ಅತ್ಯುತ್ತಮ ನಿದರ್ಶನವಾಗಿದೆ. ಜಾನಕಿ ಎಂಬ ನಾಯಕಿಯ ಸುತ್ತ ಹೆಣೆದಿರುವ ಈ ಕಥೆಯು, ಪುರುಷ ಪ್ರಧಾನ ಸಮಾಜದ ತಡೆಗೋಡೆಗಳನ್ನು ಒಡೆದು ತನ್ನದೇ ಆದ ವಿಶಿಷ್ಟ ಅಸ್ಮಿತೆಯನ್ನು ಕಂಡುಕೊಳ್ಳುವ ದಿಟ್ಟ ಮಹಿಳೆಯ ಯಶೋಗಾಥೆಯನ್ನು ಕಟ್ಟಿಕೊಡುತ್ತದೆ. ಕೌಟುಂಬಿಕ ದಬ್ಬಾಳಿಕೆ, ಕಾರ್ಪೊರೇಟ್ ವಂಚನೆ ಹಾಗೂ ರಾಜಕೀಯ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಜಾನಕಿಯು ಯಶಸ್ವಿ ಉದ್ಯಮಿಯಾಗಿ, ನಟಿಯಾಗಿ ಹಾಗೂ ರಾಜ್ಯದ ಮುಖ್ಯಮಂತ್ರಿಯಾಗಿ ಬೆಳೆಯುವ ಪರಿಯನ್ನು ಕಾದಂಬರಿಕಾರರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಯಜಮಾನ್ಯ ಸಂಸ್ಕೃತಿಯನ್ನು ಧಿಕ್ಕರಿಸಿ, ಹೆಣ್ಣು ಕೇವಲ ಭೋಗದ ವಸ್ತುವಲ್ಲ; ಆಕೆಗೂ ಅಪಾರ ಜ್ಞಾನ, ಪ್ರತಿಭೆ ಮತ್ತು ಶಕ್ತಿ ಇದೆ ಎಂಬುದನ್ನು ಈ ಕೃತಿ ದೃಢವಾಗಿ ಸಾರುತ್ತದೆ. ಸಮಕಾಲೀನ ಸಮಾಜದ ವ್ಯವಸ್ಥೆಯ ಡೋಂಗಿತನವನ್ನು ವಿಮರ್ಶಿಸುತ್ತಲೇ, ಮಹಿಳಾ ಹೋರಾಟದ ನೈಜ ಚಿತ್ರಣವನ್ನು ಹಾಗೂ ಸ್ತ್ರೀವಾದಿ ನೆಲೆಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ವಿಮರ್ಶಕರು ಇಲ್ಲಿ ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದ್ದಾರೆ.

**KEYWORDS:** ಫ್ರೀಡಮ್ ಕಾದಂಬರಿ, ಸ್ತ್ರೀ ಸಂವೇದನೆ, ಮಹಿಳಾ ಸಬಲೀಕರಣ, ಸ್ತ್ರೀ ಅಸ್ಮಿತೆ, ಯಜಮಾನ್ಯ ಸಂಸ್ಕೃತಿ.

* **ಡಾ. ವೀರಪ್ಪ ಪೂಜಾರ,** ಸಹಾಯಕ ಪ್ರಾಧ್ಯಾಪಕರು, ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು ಎಸ್.ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ ವಿದ್ಯಾಗಿರಿ, ಧಾರವಾಡ.

ವಾಸ್ತವವಾಗಿ ಸ್ತ್ರೀ–ಪುರುಷರು ಮಾನವ ಜಾತಿಯ ಅವಿಭಾಜ್ಯ ಅಂಗಗಳು. ಇಬ್ಬರೂ ಪೂರ್ಣರೂ ಅಲ್ಲ, ಸ್ವತಂತ್ರರೂ ಅಲ್ಲ. ಒಬ್ಬರಿಗೊಬ್ಬರು ಪೂರಕ ಮತ್ತು ಅವಲಂಬಿತರು. ಸೃಷ್ಟಿ ಕ್ರಿಯೆ ಮತ್ತು ಚಲನೆಯು ನಿಂತಿರುವುದೇ ಅಪೂರ್ಣರಾದ ಇವರಿಬ್ಬರ ಪೂರ್ಣತೆಯಲ್ಲಿ. ಯಾವುದೇ ಕಲೆಯ ಸಂದರ್ಭದಲ್ಲಿ ಸ್ತ್ರೀ ಸಂವೇದನೆಯ ಪರಿಕಲ್ಪನೆ ಅಂತಿಮವಾಗಿ ಬಯಸುವುದು ಇದೇ ಆಶಾ ಭಾವವನ್ನೇ. ಈ ಕುರಿತಂತೆ ವಿಭಿನ್ನ ಮತ್ತು ಆರೋಗ್ಯ ಪೂರ್ಣ ನೋಟಗಳನ್ನು ಹೊಂದಿರುವವರು, ಉದಯೋನ್ಮುಖ ಮಹಿಳಾ ಚಿಂತಕರು, ವಿಮರ್ಶಕರು, ಕಾದಂಬರಿಕಾರರು ಆಗಿರುವ ಡಾ. ಈರಣ್ಣ ಇಂಜಗನೇರಿಯವರು, ಮಹಿಳಾ ಕ್ಷೇತ್ರದ 'ಕನ್ನಡ ಸ್ತ್ರೀವಾದಿ ವಿಮರ್ಶೆಯ ತಾತ್ವಿಕ ನೆಲೆಗಳನ್ನು' ಅಧ್ಯಯನ ಮಾಡಿದ ಇವರಿಗೆ ಆ ಕ್ಷೇತ್ರದ ಅಗಾಧವಾದ ಅನುಭವವನ್ನು ದಕ್ಕಿಸಿಕೊಂಡಿದ್ದಾರೆ. ಅದರ ಫಲವೆನ್ನುವಂತೆ ಅವರ ಮೂರನೆಯ ಕಾದಂಬರಿ 'ಫ್ರೀಡಮ್' ಇತ್ತೀಚೆಗೆ ಲೋಕಾರ್ಪಣೆಗೊಂಡಿದೆ. ಇದು ಈ ಹಿಂದಿನ ಅವರ 'ಮಾಧವಿ', 'ಶಿವಗಂಗಾ' ಕಾದಂಬರಿಗಳಿಗಿಂತಲೂ, ಭಿನ್ನವಾಗಿ ವಿಕಾಸಶೀಲ ಜ್ಞಾನ ಮತ್ತು ಅನುಭವದ ಹೂರಣವೆನ್ನುವಂತೆ ಮೂಡಿ ಬಂದಿದೆ. ಆ ಮೂಲಕ ಕನ್ನಡದಲ್ಲಿ ಕಾದಂಬರಿ ಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆ ನಿಲ್ಲುವ ಸರ್ವ ಲಕ್ಷಣಗಳೂ ಡಾ. ಈರಣ್ಣ ಇಂಜಗನೇರಿಯವರಿಗಿದೆ ಎಂಬುದು ಅವರ ಮೂರೂ ಕಾದಂಬರಿಗಳನ್ನು ಗಮನಿಸಿದರೆ ವೇದ್ಯವಾಗುತ್ತದೆ. ಇಂದು ಕನ್ನಡ ಸಾಹಿತ್ಯದಲ್ಲಿ ಕಾವ್ಯವನ್ನೇ ಹೆಚ್ಚು ಮೆಚ್ಚಿ ಅದರಲ್ಲೇ ಕೃಷಿಗೈಯುವ ಸಮಯದಲ್ಲಿ, ಕಾದಂಬರಿಯಂತಹ ಸೃಜನಶೀಲ ಕ್ಷೇತ್ರ ಬರಡಾಗುವ ಕೂಗು ಕನ್ನಡಕ್ಕೆ ಬಂದಿರುವಾಗ, ಡಾ. ಈರಣ್ಣನಂತವರು ಈ ಕ್ಷೇತ್ರವನ್ನು ಪ್ರವೇಶಿಸಿದ್ದು ಕನ್ನಡದ ಮಟ್ಟಿಗೆ ಆಶಾದಾಯಕವಾದುದಾಗಿದೆ. ಮತ್ತು ಸ್ಫೂರ್ತಿಯುತವಾದುದು ಹೌದು.

ಸದಾ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡ ಇವರು, ಕನ್ನಡ ಸಾಹಿತ್ಯಪರ ಚಟುವಟಿಕೆಗಳಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿದ್ದಾರೆ ಎಂಬುದು ಅವರ ಈವರೆಗಿನ ಅನೇಕ ಪ್ರಕಾರದ ಸಾಹಿತ್ಯಿಕ ಚಟುವಟಿಕೆಗಳನ್ನು ಗಮನಿಸಿದರೆ ತಿಳಿಯುವಂತದ್ದು. ಅಧ್ಯಯನ–ಅಧ್ಯಾಪನಗಳೇ ಉಸಿರಾಗಿಸಿಕೊಂಡ ಇವರು ವಿದ್ಯಾರ್ಥಿಗಳ ನೆಚ್ಚಿನ ಕನ್ನಡ ಅಧ್ಯಾಪಕರಾಗಿ, ಉತ್ತಮ ಸಂಶೋಧಕರಾಗಿ ಕಿರಿಯ ವಯಸ್ಸಿನಲ್ಲಿಯೇ ಅನೇಕ ಪ್ರಶಸ್ತಿ ಮತ್ತು ಫೆಲೋಶಿಪ್‌ಗಳಿಗೆ ಭಾಜನರಾಗಿದ್ದಾರೆ. ಸದಾ ಒಂದಿಲ್ಲೊಂದು ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಭರವಸೆಯನ್ನು ಹೆಚ್ಚಿಸುವ ಸಾಹಿತಿಯಾಗಿದ್ದಾರೆ. ಉತ್ಸಾಹ ಮತ್ತು ಧನಾತ್ಮಕ ಚಿಂತನೆಗಳನ್ನು ಹೆಚ್ಚಾಗಿ ಮೈಗೂಡಿಸಿಕೊಂಡ ಇವರು, ತಾನು ಕೈಗೆತ್ತಿಕೊಂಡ ಪ್ರತಿ ಕೆಲಸಕ್ಕೆ ನ್ಯಾಯ ಒದಗಿಸುವ ಮನಸ್ಥಿತಿ ಇವರದು. ಇವರ ನಿರಂತರ ಸಾಹಿತ್ಯ ಕಾರ್ಯಚಟುವಟಿಕೆಗಳ ಫಲವಾಗಿ 'ಫ್ರೀಡಮ್' ಕಾದಂಬರಿಯು ಸೊಗಸಾಗಿ ಮೂಡಿ ಬಂದಿದೆ. ಕನ್ನಡ ಸಾಹಿತ್ಯದಲ್ಲಿ 'ಸ್ತ್ರೀ' ಸಂವೇದನೆಯ ವಿಷಯವನ್ನು ಚರ್ಚೆಗೆ ತೆಗೆದುಕೊಂಡ ಇವರು, ಆಧುನಿಕ ಕನ್ನಡ ಸಾಹಿತ್ಯದಲ್ಲಿನ 'ಸ್ತ್ರೀ' ಅಸ್ಮಿತೆಗೆ ವಿಶೇಷವಾದ ಬೆಳಕನ್ನು ಚೆಲ್ಲಿದ್ದಾರೆ.

'ಫ್ರೀಡಮ್' ಕಾದಂಬರಿಯ ನಾಯಕಿ ಜಾನಕಿ. ಇವಳು 'ಸ್ತ್ರೀ' ಕುರಿತು ಭಾರತೀಯ ಪರಂಪರೆ, ಸಂಪ್ರದಾಯ ಮತ್ತು ಅಜ್ಞಾನ, ಅವೈಚಾರಿಕತೆಯಂತಹ ತಡೆಗೋಡೆಗಳಿಗೆ ಶರಣಾಗದೆ, ಅವುಗಳೊಂದಿಗೆ ಹೊಂದಿಕೊಂಡೋ ಅಥವಾ ಧಿಕ್ಕರಿಸಿಯೋ ನೈಜ ಶಕ್ತಿಯನ್ನು ಅನಾವರಣಗೊಳಿಸಿ, ತನಗೂ ಎಲ್ಲವೂ ಸಾಧ್ಯ ಎಂಬುದನ್ನು ಸಾಧಿಸಿ ತೋರಿಸುವ ದಿಟ್ಟ ಮಹಿಳೆ, ವ್ಯವಸ್ಥೆಯ ಕೂಪಕ್ಕೆ ಸಿಕ್ಕು ಬದುಕುವ ಆಸೆಯನ್ನೇ ಕಳೆದುಕೊಂಡ ಜಾನಕಿಯು, ಎಲ್ಲವನ್ನೂ ಎದುರಿಸಿ, ನೋವುಂಡು, ಅಸಾಮಾನ್ಯ ಸಾಧಕಿಯಾಗಿ ನಮ್ಮೆದುರು ಮಹಿಳಾ ದಂತಕಥೆಯಾಗಿ ನಿಲ್ಲುತ್ತಾಳೆ. ಪುರುಷ ನಿರ್ಮಿತ ಕೋಟೆಯಲ್ಲಿ ಶೋಧಕ್ಕೆ ತೊಡಗಿದಾಗ 'ಸ್ತ್ರೀ'

ಸಮುದಾಯದ ಭಿನ್ನಸ್ವರ ಕೇಳಬಲ್ಲದು. ಪುರುಷನ ಅಧಿಕಾರದ ವಲಯದ ಒಳಗೆ ತನ್ನ ದನಿ ಅಡಗಿಸಿ ಮೂಕತೆಯನ್ನು ಒಪ್ಪಿ ಬಂದ ಮಹಿಳಾ ಪರಂಪರೆಯ ಆಳಕ್ಕಿಳಿದರೆ, ಕೆಲವೊಮ್ಮೆ ಪುರುಷಾಧಿಕಾರದ ನಿಯಂತ್ರಣಗಳನ್ನು ದಾಟಿ, ತನ್ನ ಅಸ್ಮಿತೆಯ ಶೋಧನೆಗೆ ಇಳಿದ ಸ್ತ್ರೀ ಹೆಜ್ಜೆ ಗುರುತುಗಳನ್ನು ಗಮನಿಸಬಹುದು. ತನ್ನ ಸಂಸಾರಿಕ ಮತ್ತು ಕೌಟುಂಬಿಕವಾದ ಸಾಮಾನ್ಯ ಬದುಕಿನ ಹಲವು ಆಯಾಮಗಳನ್ನು ದಾಟಿ ಕುಟುಂಬವೊಂದೆ ತನ್ನ ಪ್ರಪಂಚವಲ್ಲ, ಈ ಸೀಮಿತತೆಯನ್ನು ಮೀರಿದ ವಿಶಾಲ ಜಗತ್ತಿಗೆ, ಅದರಲ್ಲಿ ತನ್ನ ಅಸ್ಮಿತೆಯನ್ನು ಛಾಪಿಸಬಲ್ಲದೆ ಎಂಬ ಆತ್ಮವಿಶ್ವಾಸ ಹಲವು ಸಶಕ್ತ ಮಾದರಿಗಳು ನಮ್ಮ ಕಣ್ಣ ಮುಂದಿವೆ. ಇಲ್ಲಿ ಜಾನಕಿಯ ತಾಯಿಗೆ ಇಬ್ಬರೂ ಹೆಣ್ಣು ಮಕ್ಕಳು ಎನ್ನುವ ಕಾರಣಕ್ಕೋ ಅಥವಾ ಪುರುಷ ಅಹಂಕಾರಕ್ಕೋ, ತಾಯಿಯನ್ನೂ, ತನ್ನ ಮಕ್ಕಳನ್ನೂ ಬಿಟ್ಟು ಹೋಗುವುದು, ಗಂಡನನ್ನು ಕಳಕೊಂಡ ಜಾನಕಿಯ ತಾಯಿ, ಮಗಳನ್ನು ಓದಿಸುವುದು ಕೊನೆಯಲ್ಲಿ ತಂಗಿ–ತಾಯಿ ಜಾನಕಿಯ ಕಣ್ಣೆದುರು ದುರಂತಕ್ಕೀಡಾಗುವುದರ ಹಿಂದೆ ಪುರುಷ ದಬ್ಬಾಳಿಕೆಯೇ ಕಾರಣವಾಗಿದೆ ಎಂಬುದು ಗಮನೀಯ.

ಸ್ತ್ರೀ ಎಷ್ಟೋ ಸಲ ತನ್ನ ಧ್ವನಿ ತಗ್ಗಿಸಿ, ಭಾವನೆಗಳನ್ನು ಹತ್ತಿಕ್ಕಿ, ಅನಿಸಿಕೆಗಳನ್ನು ಬದಿಗೊತ್ತಿ, ವ್ಯವಸ್ಥೆಗೆ ಮೌನವಾಗುವ, ಕೆಲವೊಮ್ಮೆ ಮೂಕವಾಗುವ ಹಲವು ಸ್ತ್ರೀ ಸಮುದಾಯಗಳಿವೆ. ಇನ್ನೊಂದಿಷ್ಟು ಮೌನದ ಒಳಗಿನ ನೋವನ್ನು ಪ್ರತಿರೋಧವಾಗಿಸಿ, ಮೂಕತೆಯ ಹಿಂದಿನ ಯಾತನೆಯನ್ನು ಅನುಭವಿಸುತ್ತಲೇ ಮೌನವಾಗಿಯೇ ಅಥವಾ ವಿರೋಧವಾಗಿಯೇ ತನ್ನ ಒಳಧ್ವನಿಗೆ ಬೆಂಬಲವನ್ನು ಒದಗಿಸುತ್ತಾ ಸಾಗಿ, ತನ್ನ ಅಸ್ಮಿತೆಯನ್ನು ಸ್ಥಾಪಿಸುವ ವಿಭಿನ್ನ ಮಾರ್ಗಗಳನ್ನು ಹುಡುಕುವ ವ್ಯಕ್ತಿತ್ವಗಳಿವೆ ಎಂಬುದನ್ನು 'ಫ್ರೀಡಮ್' ಕಾದಂಬರಿಯು, ಜಾನಕಿಯ ಮೂಲಕ ಹೇಳಲು ಹೊರಟಂತಿದೆ. ಇದು ಜಾನಕಿಯ ಮುಖೇನ ನಮ್ಮ ಸ್ಥಾಪಿತ ಗ್ರಹಿಕೆಗಳನ್ನು ಮುರಿದು ಹೊಸತನ ಪರಿಚಯಿಸುವಂತೆ ಲೇಖಕರು ನಿರೂಪಿಸಿದ್ದು ಅವರ ಸೃಜನಶೀಲತೆಗೆ ಸಾಕ್ಷಿ ಎನಿಸಿದೆ.

ಯಜಮಾನ್ಯ ಸಂಸ್ಕೃತಿಯ ಒಳಗಿನ ಹೆಣ್ಣಿನ ಆಸೆ, ಆಕಾಂಕ್ಷೆ, ಅಭೀಪ್ಸೆಗಳು 'ಫ್ರೀಡಮ್' ಕಾದಂಬರಿಯಲ್ಲಿ ಅಡಗದೆ, ಮಡಿವಂತಿಕೆ, ಸಂಕೋಚ, ಸಾಂಪ್ರದಾಯಿಕತ್ವ ಮೀರುವ ಸವಾಲನ್ನು ಮುಖಾಮುಖಿಯಾಗಿಸುವಂತೆ ಚಿತ್ರಿತವಾಗಿದೆ. ಪ್ರೇಮ, ವಿವಾಹ, ಎಂಬೆಲ್ಲ ಭಾವನಾತ್ಮಕವಾಗಿ ನಂಬಿಸಿ, ತಮ್ಮ ವ್ಯಕ್ತಿತ್ವವನ್ನೇ ಹೊಸಕಿ ಹಾಕುವಲ್ಲಿ, ಧೈರ್ಯವಾಗಿ ಎದುರಿಸಿ ನಿಲ್ಲುವ ಮತ್ತು ಅದೆಲ್ಲವೂ ಪವಿತ್ರ ಎನ್ನಿಸುವಂತೆ ತೋರಿದರೆ, ಪ್ರಾಣವನ್ನೇ ಅರ್ಪಿಸುವ ಅಪ್ಪುಗೆ ಮತ್ತು ತಿರಸ್ಕಾರ ಎರಡಕ್ಕೂ ಸೈ ಎನ್ನುವ ಸ್ತ್ರೀ ಸ್ವಭಾವದ ಮೇಲೆ ಬೆಳಕು ಚೆಲ್ಲುವ ಪಾತ್ರಗಳು ಸಂಗತಿಗಳು, ಘಟನೆಗಳು ಈ ಕಾದಂಬರಿಯಲ್ಲಿ ವಿನೂತನವೆನ್ನುವಂತೆ ಮೂಡಿಬಂದಿವೆ. ಜಾನಕಿಯು ತಾನು, ತಾಯಿಯು ಕಲಿಸಿದ ವಿದ್ಯೆ ಮತ್ತು ಸ್ವಾಭಿಮಾನವನ್ನು ಮರೆಯದೇ, ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡು, ಅಲ್ಲಿ ಅತ್ಯಂತ ಪ್ರಾಮಾಣಿಕ ಮತ್ತು ಕ್ರಿಯಾಶೀಲತೆಯಿಂದ ದೇಶ–ವಿದೇಶಗಳಿಗೆ ಸಂಚರಿಸಿ ತಾನು ನಂಬಿದ ಮತ್ತು ಅವಕಾಶ ಒದಗಿಸಿದ ಕಂಪನಿಯನ್ನು ಶ್ರದ್ಧೆಯಿಂದ ಪ್ರೀತಿಸಿ ಪ್ರಸಿದ್ಧಿ ಮತ್ತು ಲಾಭ ತರುವಲ್ಲಿ ಪ್ರಮುಖ ಪಾತ್ರವಹಿಸುತ್ತಾಳೆ. ಆದರೇನು? ಅವಳು ಎಷ್ಟೇ ಲಾಭ ಪ್ರಸಿದ್ಧಿ ತಂದರೂ, ಅವಳು ಹೆಣ್ಣು ಅಲ್ಲವೇ? ಅವಳ ಸಾಧನೆ ಮತ್ತು ಏಳಿಗೆಯನ್ನು ಸಹಿಸದ ಪುರುಷ ಸ್ವಾರ್ಥಕ್ಕೆ ಬಲಿಯಾಗುತ್ತಾಳೆ. ಕೊನೆಗೆ ಶಿವಗ್ರೂಪ್ ಆಫ್ ಕಂಪನಿಯಿಂದ ಮೋಸಕ್ಕೊಳಗಾದರೂ, ಛಲಬಿಡದೆ ಸ್ವಂತ ಕಂಪನಿಯನ್ನು ಆರಂಭಿಸಿ ತನ್ನೆಲ್ಲ ಜ್ಞಾನ, ಅನುಭವದಿಂದ ಗುಣಮಟ್ಟದ ಸೇವೆಯ ಕಾರಣಕ್ಕಾಗಿ ದೇಶ–ವಿದೇಶಕ್ಕೆ ಕೀರ್ತಿಯನ್ನು ಪಸರಿಸುತ್ತಾಳೆ. ಇದು ಜ್ಞಾನ, ಪ್ರತಿಭೆ,

ಕ್ರಿಯಾಶೀಲತೆ, ದೂರದೃಷ್ಟಿ, ಪ್ರಗತಿ, ಮುಂತಾದವುಗಳು ಪ್ರತಿಯೊಬ್ಬರ ಸ್ವತ್ತು ಅದು ಸ್ತ್ರೀ–ಪುರುಷರು ಎಂಬುದಿಲ್ಲ ಎನ್ನುವಂತಹ ಸಂದೇಶವನ್ನು ಹೊತ್ತಂತೆ ಭಾಸವಾಗುತ್ತದೆ. ಲೇಖಕರು ಇಂತಹ ವಾಸ್ತವಿಕ ಸಂಗತಿಯನ್ನು ತುಂಬಾ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

'ಫ್ರೀಡಮ್' ಕಾದಂಬರಿಯು ಬಹುತೇಕ ಸಮಕಾಲೀನ ಸಂಗತಿಗಳಿಗೆ ಪಕ್ಕಾಗಿದೆ. ಪ್ರತಿನಿತ್ಯ ನಮ್ಮೆದುರು ಸಂಭವಿಸುವ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಂಗತಿಗಳ ಲೋಲುಪತೆಗೆ ಕಾದಂಬರಿ ಕನ್ನಡಿ ಹಿಡಿದಿದೆ. ಕಾರ್ಪೊರೇಟ್ ಲೋಕದ ಅನಾವರಣ, ಮೋಸ, ವಂಚನೆ, ಕಪಟ, ಗ್ಲಾಮರ ಜಗತ್ತು, ಸೋಗಲಾಡಿತನ, ಭ್ರಷ್ಟಾಚಾರ, ಅಸಂಬದ್ಧ ಮೈತ್ರಿ, ರಾಜಕೀಯ ಡೋಂಗಿತನ, ಕೊಲೆ, ಸುಲಿಗೆ, ಅಧಿಕಾರ ಶಾಹಿಯ ಅನ್ಯಾಯ, ಪಟ್ಟಭದ್ರ ಹಿತಾಸಕ್ತಿ ಮುಂತಾದವು ತಮ್ಮ ತನವನ್ನೇ ಕಳೆದುಕೊಂಡು, ಸ್ವಾರ್ಥದಿಂದ ಬದುಕುವ ವ್ಯವಸ್ಥೆಯ ಬಗ್ಗೆ ತಣ್ಣನೆಯ ಆಕ್ರೋಶವಿದೆ. ಜಾನಕಿಯ ಗಂಡ ಒಳ್ಳೆತನದ ಸೋಗುಹಾಕಿಕೊಂಡು ನಂಬಿದ ಜ್ಯೋತ್ಸ್ನಾದಂಪತಿಗಳಿಗೂ, ಮತ್ತು ನಾಯಕಿ ಜಾನಕಿಗೂ, ಗಂಡನಾಗಿ ಪುರುಷ ಬೇಜವಾಬ್ದಾರಿತನ ಮತ್ತು ಅಹಂಕಾರದಿಂದ ಸ್ವಾರ್ಥಿಯಾಗಿ ಮೌಲ್ಯಗಳನ್ನು ಮಾರಿಕೊಂಡು ಜಾನಕಿಯಂತಹ ನೂರಾರು ಹೆಣ್ಣುಗಳ ಬಾಳು ಹೊಸಕಿ ಹಾಕುವ ಮೂಲಕ, ತನ್ನ ಕ್ರೌರ್ಯವನ್ನು ಮೆರೆಯುತ್ತಾನೆ. ಆದರೂ ಜಾನಕಿಗೆ ಅದ್ಯಾವುದೂ ತನ್ನ ಸಾಧನೆಯ ಮಾರ್ಗಕ್ಕೆ ಬೇಲಿಯಾಗದು ಎಂದು, ಧೈರ್ಯವಾಗಿ ಎಲ್ಲವನ್ನೂ ಸಹಿಸಿಕೊಂಡೇ ಯಶಸ್ವಿ ಉದ್ಯಮಿಯಾಗಿಯೂ, ಸಿನಿಮಾ ನಟಿಯಾಗಿಯೂ, ರಾಜಕಾರಣಿಯಾಗಿಯೂ, ಹೋರಾಟ ಮಾಡುತ್ತಾ, ರಾಜ್ಯವೊಂದರ ಮುಖ್ಯಮಂತ್ರಿಯಾಗಿದ್ದು ಸಮಕಾಲೀನ ಮಹಿಳೆಯರ ಆದರ್ಶ ಮಹಿಳೆಯಾಗಿ ಸ್ಫೂರ್ತಿಯನ್ನುಂಟು ಮಾಡುತ್ತದೆ. ಇಲ್ಲಿ ಕಾದಂಬರಿಕಾರರಿಗೆ ಇರುವ ಸಮಯ ಪ್ರಜ್ಞೆ, ಮತ್ತು ಕಥಾನಿರೂಪಣೆಯ ಜಾಣ್ಮೆ ಔಚಿತ್ಯ ಪೂರ್ಣವೆನಿಸಿದೆ. ಸಂಭಾಷಣೆಗಳು ಮನೋಜ್ಞವಾಗಿ ಕಾದಂಬರಿಗೆ ಮೌಲ್ಯವನ್ನು ಹೆಚ್ಚಿಸಿದೆ. ಜ್ಞಾನ, ಶಕ್ತಿ, ಪ್ರಜ್ಞೆ, ಶೀಲ, ಕರುಣೆ ಮುಂತಾದವು ಪುರುಷನಷ್ಟೆ ಹೆಣ್ಣಿಗೂ ಇದ್ದೇ ಇದೆ ಎಂಬುದು ಲೇಖಕರು ಇಲ್ಲಿ ಸಾಬೀತುಪಡಿಸಿದ್ದಾರೆ.

ಏನೆಲ್ಲ ಅಡೆತಡೆ ಮತ್ತು ತೊಂದರೆಗಳ ಮಧ್ಯೆಯೂ, ಸ್ತ್ರೀಯೊಬ್ಬಳು ಹೋರಾಟ ಮಾಡಿ ಸಾಧನೆ ಗೈದ ಯಶೋಗಾಥೆಯು ಕಾದಂಬರಿಯ ತಂತ್ರವಾಗಿದೆ. ತಾನು ಓದುವಲ್ಲಿ ಸಹಾಯ ಪಡೆದು ಬೆಳೆದ ಲಕ್ಷ್ಮಮ್ಮನ ಋಣವನ್ನು ಮರೆಯದೆ, ಮಗಳು ಸ್ವಪ್ನಳನ್ನೇ ತನ್ನ ಸ್ವಂತ ತಂಗಿಯಾಗಿ ಸ್ವೀಕರಿಸಿ, ತಾನು ಕಟ್ಟಿ ಬೆಳೆಸಿದ ಕಂಪನಿಯನ್ನು ಮತ್ತು ರಾಹುಲನ ಜೊತೆ ವಿವಾಹ ಮಾಡಿಸುವ ಕಾಳಜಿಯು ನಾಯಕಿ ಜಾನಕಿಯ ಕಾಳಜಿಗೆ ಹಿಡಿದ ಕನ್ನಡಿಯಾಗಿದೆ ಮಾತ್ರವಲ್ಲ ಸ್ತ್ರೀ ಬದ್ಧತೆಯನ್ನು ಸಾರುತ್ತದೆ. ಮತ್ತು ತನಗೆ ಲಭ್ಯವಾದ ಸೀಮಿತ ಸ್ವತಂತ್ರವನ್ನು ಯಶಸ್ವಿಯಾಗಿ ಸದುಪಯೋಗ ಪಡಿಸಿಕೊಂಡು ಮುನ್ನೆಡೆದರೆ, ಸರ್ವಸ್ವತಂತ್ರಗೊಂಡ ಪುರುಷರು ಸ್ವೇಚ್ಛಾಚಾರದಿಂದ ಬದುಕುವುಕೆಯನ್ನು ಜಯಂತ, ಗಿರೀಶ, ಶಿವಗ್ರೂಪ್ ಆಫ್ ಕಂಪನಿಯ ಮಾಲಿಕನ ಮಗ, ಮನೋಜ ಪಾತ್ರಗಳು ದುರುಪಯೋಗ ಪಡಿಸಿಕೊಂಡು ತಾವು ಮಾತ್ರವಲ್ಲದೆ ಬೇರೆಯವರ ಬಾಳು ಹಾಳು ಮಾಡುವದನ್ನು ಕಣ್ಣಿಗೆ ಕಟ್ಟುವಂತೆ ಕಾದಂಬರಿಕಾರರು ಕಟ್ಟಿಕೊಟ್ಟಿದ್ದಾರೆ. ಈ ಸಂಗತಿಯೇ ಕಾದಂಬರಿಯ ವಸ್ತುವಾಗಿದೆ.

ಕಾದಂಬರಿಕಾರರ ಸ್ತ್ರೀ ಸಂವೇದನೆಯ ಯೋಜನೆಯು ಅನೇಕ ಸಂಗತಿಗಳಿಂದ ಯಶಸ್ವಿಯಾಗಿದೆ. ವಿವಾಹ, ಕುಟುಂಬ ಪತ್ನಿತ್ವ, ಉದ್ಯೋಗ, ಗೃಹಿಣಿತ್ವ, ಮಾತೃತ್ವ, ಹೀಗೆ ಬಹುಮುಖ ಆಯಾಮಗಳಲ್ಲಿ ಪುರುಷ ದೃಷ್ಟಿಕೋನದ ನಿರ್ವಚನೆಯನ್ನು ಬದಿಗೊತ್ತಿ ತನ್ನ ಭಿನ್ನ ವರ್ತಮಾನದ ನಿಲುವುಗಳನ್ನು ಅಭಿವ್ಯಕ್ತಿಸಿದೆ. ಹೆಣ್ಣು ಕೇವಲ ದೇಹ ಮಾತ್ರ, ಭೋಗದ

ವಸ್ತು ಎಂಬ ಪುರುಷನ ಅಧಿಪತ್ಯವನ್ನು ನಿರಾಕರಿಸಿ ತಾನೊಂದು ದೇಹ ಮಾತ್ರವಲ್ಲ, ಮನಸ್ಸು, ಪ್ರತಿಭೆ, ಶಕ್ತಿ ಭಾವಗಳಿರುವ ಜೀವಿ ಎಂದು ಪ್ರಕಟಿಸಿದೆ. ತನ್ನ ಆತ್ಮ ಗೌರವಕ್ಕೆ ಧಕ್ಕೆ ಬಂದಾಗ ಆದರ್ಶ ಪತ್ನಿ, ಆದರ್ಶ ತಾಯಿ, ಗೃಹಿಣಿ ಎಂಬೆಲ್ಲ ಚೌಕಟ್ಟಿನಿಂದ ಆಚೆ ಬಂದು ಪುರುಷ ಚಿಂತನೆ ದಿಕ್ಕರಿಸಿ, ಸಿದ್ಧಮಾದರಿಯ ಅಭಿಪ್ರಾಯಗಳನ್ನು ಬದಿಗೊತ್ತಿ ಹೊಸದಾಗಿ ಹುಡುಕಿ ಯಶಸ್ಸುಕಾಣುವ ಮತ್ತು ಸಾಮರ್ಥ್ಯವನ್ನು ಸಾಬೀತು ಪಡಿಸಿಕೊಳ್ಳುವುದು ಕಾದಂಬರಿಯ ಜೀವದ್ರವ್ಯವಾಗಿದೆ. ಇಲ್ಲಿನ ಪಾತ್ರಗಳ ಸೃಷ್ಟಿ, ಸಂಗತಿಗಳ ಸಂಯೋಗ, ಸಂಭಾಷಣಾ ವಿಧಾನ, ತೀರಾ ಸರಳವಾದ ಭಾಷಾ ಸೊಗಡು, ಗಾದೆ ಮಾತುಗಳ ಬಳಕೆ, ನಿರರ್ಗಳವಾದ ನಿರೂಪಣಾ ವಿಧಾನ, ಸಾಂದರ್ಭಿಕವಾದ ಸ್ತ್ರೀ, ಪುರುಷಗಳ ಪಾತ್ರ ಪ್ರವೇಶ ಎಲ್ಲ ರೀತಿಯಿಂದಲೂ ಕಾದಂಬರಿ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ಗುರುತಿಸಿಕೊಳ್ಳುವ ಯೋಗ್ಯತೆ ಇದೆ. ಇಲ್ಲಿನ ಒಟ್ಟು ಹದಿನೈದು ಅಧ್ಯಾಯಗಳು, ಹದಿನೈದು ಸಂಗತಿಗಳಾಗಿ ವರ್ತಮಾನ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ಮಹಿಳಾ ಸಾಂಸ್ಕೃತಿಕ ಲೋಕದ ಮೇಲೆ ಬೆಳಕು ಚೆಲ್ಲುವಂತೆ ಕಾದಂಬರಿ ಮೂಡಿ ಬಂದಿದೆ.

ಅಂತಿಮವಾಗಿ ಕಾದಂಬರಿಯು, ಸ್ತ್ರೀ ಕೇಂದ್ರಿತ ಮಹಿಳಾ ಕಾದಂಬರಿಕಾರರು, ಕತೆಗಾರರಂತೆ, ಡಾ. ಈರಣ್ಣ ಇಂಜಗನೇರಿಯವರು ಸ್ತ್ರೀ ಸಂವೇದನೆಯನ್ನು, ಅವರಂತೆಯೇ ಅಥವಾ ಅವರಿಗಿಂತಲೂ ಪುರುಷನಾಗಿ ತಾವು ಕಂಡುಕೊಂಡ ಸಂವೇಧನೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಗೊಳಿಸಿದ್ದು 'ಫ್ರೀಡಮ್' ಕಾದಂಬರಿಯನ್ನು ಓದಿದಾಗ ಅನ್ನಿಸದಿರದು. ಇದೊಂದು ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆಯೇ ಎನ್ನಬೇಕು. ಡಾ. ಈರಣ್ಣ ಇಂಜಗನೇರಿಯವರಿಂದ ಇನ್ನೂ ಹೆಚ್ಚು ಹೆಚ್ಚು ಸಾಹಿತ್ಯ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಹರಿದು ಬರಲಿ ಎಂದು ಆಶಿಸುತ್ತೇನೆ.